(ಈ ಹಂತದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದದ ಉತ್ತರಗಳು

ನೆಲಮಂಗಲ ಕ್ಷೇತ್ರದಲ್ಲಿ ಆರಕ್ಷಕ ಠಾಣೆಗಳ ಸ್ಥಾಪನೆ

81 (491) ಶ್ರೀ ಆಂಜನ ಮೂರ್ತಿ (ನೆಲಮಂಗಲ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ಮತ ಕ್ಷೇತ್ರಕ್ಕೆ ಸೇರಿದ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ.

1) ಕನಸಲಾಡಿ ಸಮೀಪ ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ

2) ಅಂಚೆಪಾಳ್ಯ ಸಮೀಪ ಮಾಗಡಿ ತಾಲ್ಲೂಕು ಸೋಲೂರು ಹೋಬಳಿ

3) ಸೋಲೂರು ಗ್ರಾಮದ ಸಮೀಪದಲ್ಲಿ ಆಗಾಗ್ಗೆ ಗಲಭೆ, ಕಳ್ಳತನ, ಕೊಲೆ, ದರೋಡೆ ಮುಂತಾದವು ಜರುಗುತ್ತಿರುವುದನ್ನು ತಡೆಗಟ್ಟಲು ಸದರಿ ಸ್ಥಳಗಳನ್ನು ಒಂದೊಂದು ಪೋಲೀಸ್ ಠಾಣೆ ತೆರೆಯಬೇಕೆಂದು ಒತ್ತಾಯಿಸಿ ಮನವಿಗಳೇನಾದರೂ ಬಂದಿದೆಯೇ ?

ಆ) ಹಾಗಿದ್ದಲ್ಲಿ , ಈ ದಿಸೆಯಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ಆಂಜನಮೂರ್ತಿ:- ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರಕ್ಕೆ ಸೇರಿದ ಮೂರು ಜಾಗಗಳಲ್ಲಿ ಹೊಸದಾಗಿ ಪೋಲೀಸ್ ಠಾಣೆಗಳನ್ನು ಮಂಜೂರು ಮಾಡಬೇಕೆಂದು ನಾನು ಕೇಳುತ್ತಿದ್ದೇನೆ. ಕಾರಣವೇನೆಂದರೆ ಅಲ್ಲಿ ಹೆಚ್ಚಿನ ವಾಹನ ಸಂಚಾರ, ಜನಸಂದಣಿ ಇದ್ದು ಆಗ್ಗಾಗ್ಗೆ ಸಮಾಜಘಾತುಕರಿಂದ ಕೊಲೆ, ಸುಲಿಗೆ, ದರೋಡೆ, ಹೆಚ್ಚಿನ ಅಪಘಾತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಎರಡನೆಯದಾಗಿ ನಾನು ಸತತವಾಗಿ ಕಳೆದ ಮೂರು ವರ್ಷಗಳಿಂದ ನಾಗರೀಕರ ಹಿತದೃಷ್ಟಿಯಿಂದ ಆ ಮೂರು ಜಾಗಗಳಲ್ಲಿ ಪೋಲೀಸ್ ಠಾಣೆ ಆಗಬೇಕೆಂದು ಒತ್ತಾಯ ಮಾಡುತ್ತಿದ್ದರೂ ಅವರು ಉತ್ತರದಲ್ಲಿ ಮನವಿ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಕಳೆದ ವರ್ಷ ಆಗಿನ ಗೃಹ ಸಚಿವವಾಗಿದ್ದ ಘೋನ್ಯ ಧರ್ಮಸಿಂಗ್‌ರವವು ಸ್ಥಳಕ್ಕೆ ಬಂದಾಗ ನಾಗರೀಕರ ಮನವಿ ಮೇರೆಗೆ ಪೋಲೀಸ್ ಠಾಣೆಯನ್ನು ಮಂಜೂರು ಮಾಡಿಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿರುವುದು ಸರ್ಕಾರದ ಗಮನದಲ್ಲಿಲ್ಲವೇ ? ಆದರೂ ಕೂಡ ಅವರ ಈ ಉತ್ತರ ನೋಡಿದಾಗ ನಿರಾಸೆಯಾಗುತ್ತದೆ. ಕೆಲವು ಅಮಾಯಕ ನಾಗರೀಕರಿಗೆ ಆಗುತ್ತಿರುವ ತೊಂದರೆ, ಕಿರುಕುಳವನ್ನು ತಪ್ಪಿಸಲು ಅಲ್ಲಿ ಮೂರು ಪೋಲೀಸ್ ಠಾಣೆಗಳನ್ನು ಸರ್ಕಾರ ಹೊಸದಾಗಿ ಮಂಜೂರು ಮಾಡುವುದಕ್ಕೆ ಕ್ರಮ ಕೈಗೊಳ್ಳುವುದೇ ? ಇದರ ಬಗ್ಗೆ ಖಚಿತವಾಗಿ ಉತ್ತರ ಕೊಡಬೇಕೆಂದು ನಾನು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ರಾಮನಾಥ ರೈ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇವೆ. ಆದರೂ ಕೂಡ ಈಗ ಅವರು ಕೇಳಿದಂತಹ ಮೂರು ಜಾಗಗಳ ಪ್ರದೇಶವನ್ನು

ನೋಡಿದಾಗ ಹತ್ತಿರದಲ್ಲಿ 9 ಕಿ.ಮೀ.ನಲ್ಲಿ ಕನಸುವಾಡಿಯಿಂದ ದೊಡ್ಡಬೆಲಮಂಗಲದಲ್ಲಿ ಪೋಲೀಸ್ ಠಾಣೆ ಇದೆ. ಇದೇ ರೀತಿಯಲ್ಲಿ ದ್ವಾಸನಪುರ ಅಲ್ಲಿಂದ 7 ಕಿ.ಮೀ. ದ್ವಲ್ಲಿ ನೆಲ್ಲಮ್ಮಂಗಲ ಪೋಲೀಸ್ ಠಾಣೆ ಇದೆ. ಅಂಚೆಪಾಳ್ಯ ತಲ್ಲಿಂದ 12 ಕಿ.ಮೀ. ದೂರದಲ್ಲಿ ನೆಲಮಂಗಲ ಸಿಗುತ್ತದೆ. ಆದ್ದರಿಂದ ಅವರ್ಗಪ್ಪುನ್ನಖಿ ಖಾಳಿಜ್ಞೆಂಡಿಅದನ್ನುಡಿಸಾನಾವ್ಲುಪ್ರಸ್ತಾಪಿಸಿಸ್ಥತ್ಸೆ, ಅಡಕ್ಕೆಲೆಮಾತ್ತು ಸಂಪನ್ನೂಲಗಳನ್ನು. ಆಧರಿಸಿ, ಪೋಲೀಸ್ ಠಾಣೆಗಳನ್ನು ತೆರೆಯಲು ಪರಿಶೀಲಿಸುತ್ತೇವೆ.

(ಅಗಂಡಡಂಡಿ) ಕಿಕಿಂಡಿಡ ಡಪಂಲಿ ಗ್ರಿ (1994) 13

ಶ್ರೀ ಅಂಜನಮೂರ್ತಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಸಂಬಂಧಪಟ್ಟಂಥ ಅಧಿಕಾರಿಗಳು ಸರಿಯಾದ ಉತ್ತರ ಕೊಟ್ಟಿಲ್ಲವೆಂದು ಕಾಣುತ್ತದೆ. ಮಾನ್ಯ ಸಚಿವರು ದೊಡ್ಡಬಳ್ಳಾಪುರದಿಂದ ಕನಪ್ಪಳ್ಳಾಡಿಗೆ 9 ಕಿಲೋಮೀಟರ್ ಗಳ್ಳಾಗುತ್ತದೆಂದು ಹೇಳುತ್ತಾರೆ. ವಾಸ್ತವದಲ್ಲಿ ವಿಜಯಾಗಿಯೂ 15 ಕಿಲೋಮೀಟರ್ ದೂರ ಅಂತರದಲ್ಲಿದೆ. ಅಲ್ಲೊಂದು ಶನಿದೇವರ ದೇವಸ್ಥಾನವಿರುವುದರಿಂದ ಆಗಾಗ್ಗೆ ಹೆಚ್ಚಿನ ಜನ ಸಂದಣಿ ಸೇರುವುದರಿಂದ ಅಲ್ಲಿ ಅಪಘಾತ, ಕಳ್ಳತನ, ದರೋಡೆಯಾಗುತ್ತದೆ. ಅದೇ ರೀತಿ ಅಂಚೆಪಾಳ್ಯದಿಂದ ನೆಲಮಂಗಲ ಪೋಲೀಸ್ ಠಾಣೆಗೆ 15-16 ಕಿಲೋಮೀಟರ್ ಆಗುತ್ತದೆ. ಆದ್ದುದ್ದರಿಂದ್ದ ಅಂಚೆಪ್ಪಾಳ್ಯದಲ್ಲಲ್ಲಿರುವ ಅವಶ್ಯಕತೆ ಇರುವ ಜನರ್ಗ್ರಾ ತೊಂದರೆ ಅನುಭವಿಸುತ್ತಿರುವುದರಿಂದ ಕೂಡಲೇ ಅಲ್ಲೊಂದು ಪೋಲೀಸ್ ಠಾಣೆಯನ್ನು ತೆರೆಯುವ ಬಗ್ಗೆ ಖಚಿತವಾದ ಉತ್ತರ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ರಮಾನಾಥ ರೈ:– ಅಲ್ಲಿನ ಅಗತ್ಯತೆ ಮತ್ತು ಆದ್ಯತೆಯನ್ನು ಮನಗಂಡು ಸಂಪನ್ನೂಲಗಳನ್ನು ಆದರಿಸಿ ಅಲ್ಲೊಂದು ಹೊಸ ಪೋಲೀಸ್ ಠಾಣೆ ತೆರೆಯಲು ನಾವು ಪರಿಶೀಲಿಸುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ನಾರಾಯಣ ರಾವ್ ಮನಹಳ್ಳಿಯವರು ಈಗ ಜೈಲಿನಲ್ಲಿದ್ದಾರೆ. ಹಾಗಾಗಿ ಅವರು ಇಲ್ಲಿ ಪ್ರಶ್ನೆ ಕೇಳುವಂಥ ಸ್ಥಿತಿಯಲ್ಲಿಲ್ಲವಾದ್ದರಿಂದ ನನಗೆ ಅವರ ಪ್ರಶ್ನೆ ಸಂಖ್ಯೆ : 82 (1003) ಕೇಳುವುದಕ್ಕೆ ತಾವು ಅವಕಾಶ ಮಾಡಿಕೊಡುತ್ತೀರಾ?

ಶ್ರೀ ಕೆ.ಎಸ್. ಈಶ್ವರಪ್ಪ:– ಅವರು ಸದನಕ್ಕೆ ಬರಬೇಕಾಗಿತ್ತು. ಅವರನ್ನು ಜೈಲಿನಲ್ಲಿಟ್ಟಿದ್ದೀರಿ.

ಶ್ರೀ ಅಧ್ಯಕ್ಷರು:– ಈ ಪ್ರಶ್ನೆಯನ್ನು ನಾನು ತಡೆ ಹಿಡಿದಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಈಗ ವಿಶೇಷ ಪರಿಸ್ಥಿತಿಯಿರುವುದರಿಂದ ನಿಯಮಾವಳಿಯಲ್ಲಿ ಮಾನ್ಯ ಅಧ್ಯಕ್ಷರೇ ತಾವು ಪ್ರಶ್ನೆ ಕೇಳುವುದಕ್ಕೆ ಅವಕಾಶವಿದೆ. ಇದ್ದುದರಿಂದ ಪ್ರಮುಖವಾಗಿರುವಂಥ ಪ್ರಶ್ನೆಯಾಗಿದ್ದುದ್ದಕ್ಕೆ ಸಾರ್ವಜನಿಕರಿಗೆ ಸಂಬಂಧಪಟ್ಟಿರುವುದರಿಂದ ತಾವೇ ಸಂಬಂಧಪಟ್ಟ ಸಚಿವರಿಗೆ ಪ್ರಶ್ನೆ ಕೇಳಬಹುದಾಗಿದೆ. ಆಲ್ಲದೆ, ಮಾನ್ಯ ಸದಸ್ಯರನ್ನು ಬಂಧಿಸುವುದಕ್ಕೆ ಗೌರವವೇ ಸೂಚನೆ ಇರಲಿಲ್ಲ.

ಶ್ರೀ ಅಧ್ಯಕ್ಷರು:– ಈ ಪ್ರಶ್ನೆಯನ್ನು ತಡೆ ಹಿಡಿದಿದ್ದೇನೆ.